# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಸ್ಪೆಷಲ್ ಕೇಸ್: 54/2019

ಪ್ರಾಸಾ- 10
ಚಾಸಾ- 20

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾಃ ಪ್ರಮೋದ್ |
| ತಂದೆಯ ಹೆಸರು | : | ಕೆ.ಪಿ. ತೇಜೊರಾಮಶೆಟ್ಟಿ |
| ವಯಸ್ಸು | : | 44 ವರ್ಷ |
| ವೃತ್ತಿ | : | ವೈದ್ಯಾಧಿಕಾರಿಗಳು, KIOMS, ಮಡಿಕೇರಿ |
| ವಾಸ | : | ಮಡಿಕೇರಿ. |

**ಸಾಕ್ಷಿಯನ್ನು ದಿನಾಂಕ 22-02-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ</u>**:

ನಾನು ಕಳೆದ ಏಳೂವರೆ ವರ್ಷದಿಂದ ಮಡಿಕೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತಿದ್ದೇನೆ.

ದಿನಾಂಕ 20-10-2019 ರಂದು ಸುಮಾರು ರಾತ್ರಿ 10.00 ಗಂಟೆ ಸಮಯಕ್ಕೆ ಪ್ರಾಸಾ-1 ರವರನ್ನು ಸೋಮವಾರಪೇಟೆ ಆಸ್ಪತ್ರೆಯಿಂದ ನಮಗೆ ಕಳುಹಿಸಿದ್ದು, ಅದೇ ದಿನ ಸಂಜೆ 7.40 ಗಂಟೆಗೆ ಕಾನ್ವೆಂಟ್ ಬಾಣೆ ಜಂಕ್ಷನಲ್ಲಿ ಗಣಪತಿ ಎಂಬುವವರಿಂದ ಗನ್ ಶಾಟ್ ಇಂಜೂರಿಯಾಗಿ ಗಾಯಗೊಂಡಿದ್ದಾರೆ ಎಂಬ ಹಿನ್ನೆಲೆಯಿಂದ ಆಸ್ಪತ್ರೆಗೆ ಬಂದಿದ್ದು, ನಾನು ಅವರನ್ನು ಪರೀಕ್ಷಿಸಿದಾಗ ಅವರ ದೇಹದ ಮೇಲೆ ಈ ಕೆಳಗಿನ ಗಾಯಗಳು ಇದ್ದವು.

1) ಎಡ ಭಾಗದ ಎದೆಯ ಭಾಗದಲ್ಲಿ 4 X 5 cm ಅಳತೆಯ irregular ಗಾಯ ಅದೇ ಜಾಗದಲ್ಲಿ ಅವರಿಗೆ ನೋವು ಇತ್ತು. ಸದರಿ ಗಾಯವನ್ನು ನಾನು ನೋಡಿದಾಗ ಅಲ್ಲಿ pellets ಇರುವಂತೆ ನನಗೆ ಭಾಸವಾಗಿತ್ತು. ಉಳಿದಂತೆ ಅವರ ದೇಹದಲ್ಲಿ ಬೇರೆ ಯಾವುದೇ ಗಾಯಗಳು ಇದ್ದಿರಲಿಲ್ಲ. ನಾನು ಅವರನ್ನು X-ray ಮಾಡಿದಾಗ ಎಡಭಾಗದಲ್ಲಿ chest wall ನಲ್ಲಿ ಹಲವಾರು pellets ಗಳು ಇದ್ದಿದ್ದವು.

ಪ್ರಾಸಾ-1 ರವರನ್ನು ನಾವು ದಾಖಲು ಮಾಡಿಕೊಂಡು ಅವರಿಗೆ ಅನತ್ಸೇಷಿಯ ನೀಡಿ ಅವರ chest wall ನಿಂದ 6 pellets ಗಳನ್ನು ನಾವು ಹೊರ ತೆಗೆದಿದ್ದೇವೆ. ಪುನಃ ನಾವು X-ray ಮಾಡಿದ ಸಂದರ್ಭದಲ್ಲಿ ಅವರ ಎದೆಯಲ್ಲಿ ಇನ್ನೂ ಹಲವಾರು pellets ಗಳು ಇವೆ ಎಂದು ಗೊತ್ತಾಗಿದೆ. ಅದಕ್ಕಾಗಿ ಗಾಯಾಳುವಿಗೆ ultrasound guided remover ಮಾಡಬೇಕಾದ ಕಾರಣ ಗಾಯಾಳುವನ್ನು Network ಆಸ್ಪತ್ರೆಗೆ ಕಳುಹಿಸಿದ್ದೇವೆ. ಮಧ್ಯರಾತ್ರಿ 12.00 ಗಂಟೆ ನಂತರ ನಾವು ಅವರನ್ನು ಕಳುಹಿಸಿದ ಕಾರಣ ನಾವು ತಾರೀಖನ್ನು ದಿನಾಂಕ 21-10-2019 ರಂದು ಬರೆದಿದ್ದೇವೆ. ಈ ಬಗ್ಗೆ ನಾನು CT scan ಮಾಡಿದ್ದು, ಅದನ್ನು ಸಹ ಮೇಲೆ ಹೇಳಿದಂತೆ ನಮೂದು ಮಾಡಿದ್ದೇನೆ. ಗಾಯಾಳುವಿನ ಶ್ವಾಸಕೋಸ ಹಾಗೂ ಹೃದಯಕ್ಕೆ ಯಾವುದೇ ಗಾಯ ಆಗಿಲ್ಲ ಎಂದು CT scan ನಲ್ಲಿ ಕಂಡು ಬಂದಿತು. ಈಗ ನಾನು ನೋಡುತ್ತಿರುವ ಸಮ್ಮರಿ ಶೀಟ್ಸ್ (ಒಟ್ಟು 22) ನಾನು ಪೊಲೀಸರಿಗೆ ನೀಡಿದ ದಾಖಲೆ ಆಗಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಅದೇ ರೀತಿ ಈಗ ನಾನು ನೋಡುತ್ತಿರುವ X-ray ನಾನು ನೀಡಿದ X-ray ಆಗಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

ನಾನು ಮೇಲೆ ಹೇಳಿದ irregular wound ಎಂದರೆ ಅದಕ್ಕೆ ಸರಿಯಾದ ಆಕಾರ ಇಲ್ಲದಿತ್ತು ಅದು ಕೋವಿಯಿಂದ ಗುಂಡು ತಗುಲಿ ಆಗಿರುವ ಗಾಯ ಆಗಿತ್ತು. ನಾನು ಪ್ರಾಸಾ-1 ರವರ ದೇಹದಿಂದ ಹೊರತೆಗೆದ pellets ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ-5 ಎಂದು ಗುರುತಿಸಲಾಗಿದೆ.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ. ಎ.ಜಿ.ಜಿ., ವಕೀಲರಿಂದ:**

ಮುಂದೂಡಲಾಗಿದೆ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ